

ಸಂಯುಕ್ತಾ ಹೊರನಾಡು

ನಡೆಸುವ ರಿಯಾಲಿಟಿ ಶೋಗೆ ಈ ವಾರ ಹೋಗುತ್ತಿಲ್ಲ, ಯಾಕೆಂದರೆ ನಾವು ನಿಯಮವನ್ನು ಪಾಲಿಸಬೇಕು ಎಂದು ಟ್ವಿಟರ್‌ನಲ್ಲಿ ಬರೆದುಕೊಂಡು ಅದನ್ನೇ ಬಹುದೊಡ್ಡ ತ್ಯಾಗವೆಂಬಂತೆ ಬಿಂಬಿಸುತ್ತಿದ್ದಾರೆ.

ಒಂದಿಷ್ಟು ಸಮಾಧಾನದ ಸಂಗತಿಯೆಂದರೆ ಹೀರೊಗಳಿಲ್ಲದ ಈ ಪಿಚ್ಚರ‍್ನಲ್ಲಿ, ಹೀರೊಯಿನ್‌ಗಳಿದ್ದಾರೆ!

ಕೋವಿಡ್ ಎರಡನೇ ಅಲೆಯ ಗಾಂಭೀರ್ಯ ಅರಿವಾಗುತ್ತಲೇ ನಟಿ ಶ್ರದ್ಧಾ ಶ್ರೀನಾಥ್, ತಮ್ಮ ಟ್ವಿಟರ್ ಖಾತೆಯಲ್ಲಿ, 'ಕೊರೊನಾಗೆ ಸಂಬಂಧಿಸಿದ ಯಾವುದೇ ವಿಷಯಗಳನ್ನು ನನಗೆ ಟ್ಯಾಗ್ ಮಾಡಿ. ಅದನ್ನು ಹೆಚ್ಚು ಪ್ರಸಾರ ಮಾಡಲು ಪ್ರಯತ್ನಿಸುತ್ತೇನೆ' ಎಂದು ಬರೆದುಕೊಂಡಿದ್ದರು. ಅಲ್ಲಿಂದ ಇಲ್ಲಿಯವರೆಗೂ ಅವರು ಸೋಷಿಯಲ್ ಮೀಡಿಯಾದಲ್ಲಿ ಆಸ್ಪತ್ರೆ, ಬೆಡ್, ಆಮ್ಲಜನಕಗಳ ಕುರಿತ ಮಾಹಿತಿಯನ್ನು ನಿರಂತರವಾಗಿ ಹಂಚಿಕೊಳ್ಳುತ್ತಿದ್ದಾರೆ. ಸಂಯುಕ್ತಾ ಹೊರನಾಡು ಕೂಡ ಈ ವಿಷಯದಲ್ಲಿ ಹಿಂದೆ ಬಿದ್ದಿಲ್ಲ. ಯಾವ ಆಸ್ಪತ್ರೆಯಲ್ಲಿ ಬೆಡ್ ಖಾಲಿ ಇದೆ ಎನ್ನುವ ಮಾಹಿತಿಯಿಂದ ಹಿಡಿದು, ಯಾವ ಆಸ್ಪತ್ರೆಯಲ್ಲಿ ಆಕ್ಸಿಜನ್ ಕೊರತೆ ಇದೆ, ಯಾರಿಗೆ ತುರ್ತು ಚಿಕಿತ್ಸೆಯ ಅಗತ್ಯ ಇದೆ ಎಂಬುದನ್ನೆಲ್ಲ ನಿರಂತರವಾಗಿ ಹಂಚಿಕೊಳ್ಳುತ್ತಿದ್ದಾರೆ.

ಶೋಷಣೆಯ ವಿರುದ್ಧ ಧ್ವನಿ ಎತ್ತಿದ ಕಾರಣಕ್ಕೆ ಕನ್ನಡ ಚಿತ್ರರಂಗದಿಂದ ಅಘೋಷಿತವಾಗಿ 'ಬ್ಯಾನ್' ಆಗಿರುವ ಶ್ರುತಿ ಹರಿಹರನ್ ಅವರೂ ಈ ವಿಷಯದಲ್ಲಿ ಸಕ್ರಿಯರಾಗಿದ್ದಾರೆ. ಬೆಂಗಳೂರಿನಲ್ಲಿ ಬಿಬಿಎಂಪಿಯಲ್ಲಿ ಕೋವಿಡ್ ರೋಗಿಗಳು ನೋಂದಣಿ ಮಾಡಿಕೊಳ್ಳುವುದು ಹೇಗೆ, ಯಾವ ರೀತಿ ಎಚ್ಚರಿಕೆ ವಹಿಸಬೇಕು ಎಂಬೆಲ್ಲ ವಿವರಗಳನ್ನು ಅವರು ಹಂಚಿಕೊಂಡಿದ್ದಾರೆ.

ಇದು ಏನನ್ನು ಸೂಚಿಸುತ್ತದೆ? ಎಷ್ಟೇ ದೊಡ್ಡ ನಟಿಯಾಗಲಿ, ಜನಪ್ರಿಯತೆ ಸಿಗಲಿ, ಹೆಣ್ಣಿನೊಳಗೆ ಇರುವ ತಾಯಿತನ ಮುಕ್ಕಾಗುವುದಿಲ್ಲ. ಸುತ್ತಲಿನ ಜಗತ್ತು ಸಂಕಷ್ಟದಲ್ಲಿರುವಾಗ ಅದು ಮಿಡಿಯುತ್ತದೆ. ಅಮ್ಮನ ಮನಸ್ಸು ಅದು. ಆದರೆ 'ಸ್ಟಾರ್' ನಟರು? ಮತ್ತೇಕೆ ವಿವರಿಸುವುದು ಬಿಡಿ, ದಂತಗೋಪುರದಲ್ಲಿ ಕೂತವರಿಗೆ ಎಚ್ಚರಾಗುವುದು ತಮ್ಮ ಕುರ್ಚಿಯಡಿಗೆ ನೀರು ನುಗ್ಗಿದಾಗಲೇ. ■

# ಭರ್ಜರಿ ಬರ್ಕ್ಲಿ



'ಬರ್ಕ್ಲಿ' ಎಂದರೆ ಸಿಗರೇಟ್ ಬ್ರ್ಯಾಂಡ್ ಒಂದರ ಹೆಸರು. ಆದರೆ ಗಾಂಧಿನಗರದ 'ಬರ್ಕ್ಲಿ'ಗೂ ಸಿಗರೇಟಿಗೂ ಎಲ್ಲಿಂದೆಲ್ಲಿಯ ಸಂಬಂಧವೂ ಇಲ್ಲ. ಹಾ, ಒಂದು ಸಂಬಂಧವಿದೆ. ಧೂಮಪಾನದ ಅಪಾಯದ ಕುರಿತ ಒಂದು ಜಾಹೀರಾತಿನಲ್ಲಿ ಪುಟ್ಟ ಹುಡುಗಿಯೊಬ್ಬಳು ಕಾಣಿಸಿಕೊಳ್ಳುತ್ತಿದ್ದಳಲ್ಲ, ಅವಳ ಹೆಸರು ಸಿಮ್ರನ್ ನಾಟೇಕರ್. ಆ ಸಿಮ್ರನ್ 'ಬರ್ಕ್ಲಿ' ಚಿತ್ರದ ನಾಯಕಿ.

ಇತ್ತೀಚೆಗಷ್ಟೇ ಟೀಸರ್ ರಿಲೀಸ್ ಮಾಡಿರುವ 'ಬರ್ಕ್ಲಿ' ಚಿತ್ರತಂಡ ಭರ್ಜರಿ ಆ್ಯಕ್ಷನ್ ಸಿನಿಮಾ ಕೊಡುವ ಸೂಚನೆ ನೀಡಿದೆ. ಸುಮನ್ ಕ್ರಾಂತಿ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ಈಗಾಗಲೇ ಚಿತ್ರದ ಚಿತ್ರೀಕರಣ ಮುಗಿದಿದ್ದು ಪೋಸ್ಟ್ ಪ್ರೊಡಕ್ಷನ್ ಹಂತದ ಕೆಲಸಗಳು ನಡೆಯುತ್ತಿವೆ. 'ಕರಿಯ 2', 'ಗಣಪ' ಸಿನಿಮಾಗಳಲ್ಲಿ ನಟಿಸಿದ್ದ ಸಂತೋಷ್ ಬಾಲರಾಜ್ ಈ ಚಿತ್ರದ ನಾಯಕ. ಆನೇಕಲ್ ಬಾಲರಾಜ್ ಚಿತ್ರಕ್ಕೆ ಹಣ ಹೂಡಿದ್ದಾರೆ. ಚರಣ್‌ರಾಜ್, ಶ್ರುತಿ, ಬಲ ರಾಜವಾಡಿ, ಬುಲೆಟ್ ಪ್ರಕಾಶ್ ಮುಂತಾದವರು ನಟಿಸಿರುವ ಈ ಚಿತ್ರಕ್ಕೆ ಜ್ಯೂಡ ಸ್ಯಾಂಡಿ ಸಂಗೀತ ಸಂಯೋಜನೆ ಮಾಡಿದ್ದಾರೆ. ■

# ಪುರುಷೋತ್ತಮನಿಗೆ ಅಪೂರ್ವ ಸಾಥ್!

ಕನ್ನಡ ಚಿತ್ರರಂಗದಲ್ಲಿ ಈಗಷ್ಟೇ ಅರಳುತ್ತಿರುವ ಪ್ರತಿಭೆಗಳಲ್ಲಿ ಅಪೂರ್ವ ಕೂಡ ಒಬ್ಬರು. ಅವರು ನಾಯಕಿಯಾಗಿ ನಟಿಸಿದ್ದ 'ಕೃಷ್ಣ ಟಾಕೀಸ್' ಇತ್ತೀಚೆಗಷ್ಟೇ ಬಿಡುಗಡೆಯಾಗಿತ್ತು. ಕೊರೊನಾ ಕಾರಣಕ್ಕೆ ಆ ಚಿತ್ರವನ್ನು ಚಿತ್ರತಂಡ ವಾಪಸ್ ತೆಗೆದುಕೊಂಡಿತ್ತು.

ಅಪೂರ್ವ ಈಗ ಹೊಸದೊಂದು ಚಿತ್ರದಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾರೆ. ಅದೂ ಜಿಮ್ ರವಿಗೆ ಜೊತೆಯಾಗಿ.

ಸಣ್ಣಪುಟ್ಟ ಪಾತ್ರಗಳಲ್ಲಿ ಮಿಂಚುತ್ತಿದ್ದ ಜಿಮ್ ರವಿ, 'ಪುರುಷೋತ್ತಮ' ಸಿನಿಮಾದಲ್ಲಿ ಪೂರ್ಣ ಪ್ರಮಾಣದ ನಾಯಕನಾಗಿ ನಟಿಸುತ್ತಿದ್ದಾರೆ. ಆ ಸಿನಿಮಾಗೆ ಅಪೂರ್ವ ನಾಯಕಿಯಾಗಿ ಆಯ್ಕೆಯಾಗಿದ್ದಾರೆ.

ಅಮರನಾಥ್ ಎಸ್.ವಿ. ಅವರು ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾದ ಮುಹೂರ್ತ ಫೆ. 14ರಂದು ನಡೆದಿತ್ತು. ಮೈಸೂರಿನ ಬೇರೆ ಬೇರೆ ಭಾಗಗಳಲ್ಲಿ ಒಂದು ಹಂತದ ಚಿತ್ರೀಕರಣ ಮಾಡಲಾಗಿದೆ. ಆದರೀಗ ಚಿತ್ರೀಕರಣ ಸ್ಥಗಿತಗೊಂಡಿದೆ.

'ಇದೊಂದು ಸೇಡಿನ ಕಥೆ. ನಾಯಕಿಯ ಸುತ್ತಲೇ ಕಥೆ ಬೆಳೆಯುತ್ತದೆ. ನಾನು ನನ್ನ ವಯಸ್ಸಿಗಿಂತ ಹಿರಿಯ ವಿವಾಹಿತೆ ಪಾತ್ರದಲ್ಲಿ ನಟಿಸಿದ್ದೇನೆ. ನಿಜಕ್ಕೂ ಇದೊಂದು ಸವಾಲಿನ ಪಾತ್ರ. ಅಷ್ಟೇ ಆಸ್ಥೆಯಿಂದ ಅದನ್ನು ನಿಭಾಯಿಸಿದ್ದೇನೆ' ಎಂದು ಖುಷಿಯನ್ನು ಹಂಚಿಕೊಳ್ಳುತ್ತಾರೆ ಅಪೂರ್ವ.

ಶ್ರೀಧರ್ ವಿ. ಸಂಭ್ರಮ್ ಸಂಗೀತ ಸಂಯೋಜನೆ, ಕುಮಾರ್ ಆರ್. ಅವರ ಛಾಯಾಗ್ರಹಣವಿರುವ ಈ ಸಿನಿಮಾವನ್ನು ಜಿಮ್ ರವಿ ಮತ್ತು ಅವರ ಸ್ನೇಹಿತರೇ ಸೇರಿಕೊಂಡು ನಿರ್ಮಿಸುತ್ತಿದ್ದಾರೆ. ■

